ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,

ದೇವದುರ್ಗ.

**CC No.576/2023**

**CW-4 PW-4**

| | | |
|---|---|---|
| ಸಾಕ್ಷಿದಾರರ ಹೆಸರು | ಃ | ದೇವೇಂದ್ರ |
| ತಂದೆ/ಗಂಡ | ಃ | ಹನುಮಂತರಾಯ |
| ವಯಸ್ಸು | ಃ | 33 |
| ಉದ್ಯೋಗ | ಃ | ಪಿಸಿ, ರಾಯಚೂರು ಗ್ರಾಮಿಣ ಠಾಣೆ |
| ವಾಸಸ್ಥಳ | ಃ | ರಾಯಚೂರು |
| ಪ್ರಮಾಣಿಕರಿಸಿದ ದಿನಾಂಕ | ಃ | **20-09-2025** |

ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ.

ನಾನು ದಿನಾಂಕ 24.10.2019 ರಿಂದ ಅಕ್ಟೋಬರ್ 2025 ವರೆಗೆ ಪಿ.ಸಿ ಎಂದು ಗಬ್ಬೂರು ಠಾಣೆಯಲ್ಲಿ ಕೆಲಸ ಮಾಡಿರುತ್ತೇನೆ.

ದಿನಾಂಕ 13.04.2023 ರಂದು ಸಂಜೆ 05.15 ಗಂಟೆಗೆ ನಾನು, ಪಿಸಿ ಚುಕ್ಕಪ್ಪ, ಪಿಸಿ ಶಂಕರ ಠಾಣೆಯಲ್ಲಿ ಇದ್ದಾಗ ಪಿಎಸ್ಐ ಇವರು ನಮ್ಮನ್ನು ಕರೆಸಿ ಖಾನಪೂರು ಗ್ರಾಮದ ಮಾರೆಮ್ಮ ಗುಡಿ ಹತ್ತಿರ ಕಿರಾಣಿ ಅಂಗಡಿ ಮುಂದೆ ಸಾರ್ವಜನಿಕ ಸ್ಥಳದಲ್ಲಿ ಅಕ್ರಮ ಮಧ್ಯ ಮಾರಾಟ ಮಾಡುತ್ತಿದ್ದ ಬಗ್ಗೆ ಮಾಹಿತಿ ಬಂದಿದ್ದು ತಕ್ಷಣ ದಾಳಿ ಮಾಡುವುದು ಇದೆ ಎಂದು ಹೇಳಿ ಬೂದೆಪ್ಪ ಮತ್ತು ರವಿ ಪಂಚರೊಂದಿಗೆ ಇಲಾಖ ವಾಹನದಲ್ಲಿ ಸಂಜೆ 05.30 ಗಂಟೆಗೆ ಠಾಣೆಯಿಂದ ಹೊರಟು ಖಾನಪೂರು ಗ್ರಾಮದ ಮಾರೆಮ್ಮ ಗುಡಿ ಹಿಂದೆ ಮರೆಯಲ್ಲಿ ವಾಹನ ನಿಲ್ಲಿಸಿ ಸ್ವಲ್ಪ ದೂರ ನಡೆದುಕೊಂಡು ಹೋಗಿ ಮರೆಯಲ್ಲಿ ನಿಂತು ನೋಡಲಾಗಿ ಒಬ್ಬ ವ್ಯಕ್ತಿ ಅಕ್ರಮ ಮಧ್ಯದ ಬಾಟಲಿಗಳನ್ನು ಚೀಲದಲ್ಲಿ ಇಟ್ಟುಕೊಂಡು ಮಾರಾಟ ಮಾಡುತ್ತಿದ್ದು ಸುತ್ತಲು ಜನರು ನಿಂತು ಮಧ್ಯದ ಪೌಚುಗಳನ್ನು ಖರೀದಿಸುತ್ತಿದ್ದು ತಕ್ಷಣ ಪಂಚರೊಂದಿಗೆ 05.45 ಗಂಟೆಗೆ ದಾಳಿ ಮಾಡಿದ್ದು ಸ್ಥಳದಿಂದ ಜನರು ಮತ್ತು ಮಧ್ಯದ ಮಾರಾಟ ಮಾಡುತ್ತಿದ್ದವನು ಸಹ ಓಡಿ ಹೋಗಿದ್ದು, ಓಡಿ ಹೋದ ವ್ಯಕ್ತಿಯ ಹೆಸರು ವಿಳಾಸ ವಿಚಾರಿಸಲಾಗಿ ಆತನ ಹೆಸರು ಬೂಸಣ್ಣ ತಂದೆ ಕರಿಬಸ್ಸಪ್ಪ ಎಂದು ಗೊತ್ತಾಗಿದ್ದು ಚೀಲವನ್ನು ಪರಿಶೀಲಿಸಲಾಗಿ ಅದರಲ್ಲಿ 90 ಎಂ.ಎಲ್ ಒ.ಸಿ ಡಿಲಕ್ಸ ವಿಸ್ಕಿಯ 50 ಪೌಚುಗಳು ಇದ್ದು ಅವುಗಳನ್ನು ರಾಸಾಯನಿಕ ಪರೀಕ್ಷೆ ಕುರಿತು ಒಂದು ಪೌಚನ್ನು ಪ್ರತ್ಯೇಕವಾಗಿ ತೆಗೆದು ಪ್ಯಾಕ್ ಮಾಡಿ ಪಿ.ಎಸ್.ಐ ಮತ್ತು ಪಂಚರ ಸಹಿ ಇರುವ ಚೀಟಿಯನ್ನು ಅಂಟಿ ಸಿರುತ್ತೇವೆ. ಪಂಚನಾಮೆಯನ್ನು ಸಂಜೆ 05.45 ರಿಂದ 06.45 ಗಂಟೆ ವರೆಗೆ ಮಾಡಿರುತ್ತೇವೆ. ಅ ಕುರಿತು ನಾನು ಹೇಳಿಕೆ ನೀಡಿರುತ್ತೇನೆ.

<u>ಪಾಟೀ ಸವಾಲುಃ ಆರೋಪಿತರ ಪರ ಟಿ.ಎನ್ ವಕೀಲರಿಂದ</u>

ನಾವು ಠಾಣೆಯಿಂದ ಹೊರಟಾಗ ಸಂಜೆ 05.30 ಗಂಟೆ ಆಗಿತ್ತು. ಖಾನಪೂರು ತಲುಪಿದಾಗ 05.45 ಗಂಟೆ ಆಗಿತ್ತು. ಗಬ್ಬೂರಿನಿಂದ ಖಾನಪೂರು 6-7 ಕಿ.ಮೀ ಇರುತ್ತದೆ. ಖಾನಪೂರು ಗ್ರಾಮಕ್ಕೆ ಹೋಗಲು ಗಬ್ಬೂರು ಗ್ರಾಮದ ಒಳಗಿಂದ ಹಾದು ಹೋಗಬೇಕು ಎಂದರೆ ಸರಿ. ಗಬ್ಬೂರು ಗ್ರಾಮದ ಒಳಗಡೆ ಅಂಗಡಿಗಳು ಇವೆ ಎಂದರೆ ಸರಿ. ಖಾನಪೂರು ಗ್ರಾಮದಲ್ಲಿ ಅಂಗಡಿಗಳು ಇವೆ ಎಂದರೆ ಸರಿ. ಮಾರೆಮ್ಮ ಗುಡಿ ಹತ್ತಿರ ಸಾಕಷ್ಟು ಜನ ಸೇರಿರುತ್ತಾರೆ ಎಂದರೆ ಸರಿ. ಕಿರಾಣಿ ಅಂಗಡಿ ಆರೋಪಿಗೆ ಸೇರಿದ್ದು ಇರುತ್ತದೆ ಎಂದು ಸ್ಥಳದಲ್ಲಿ ವಿಚಾರಣೆ ಮಾಡಿರುತ್ತೇವೆ. ಅಂಗಡಿ ಪಂಚಾಯಿತಿ ನಂ. ಹೇಳಲು ಬರುವುದಿಲ್ಲ. ಓಡಿ ಹೋದ ಜನರ ಹೆಸರು ಹೇಳಲು ಬರುವುದಿಲ್ಲ. ಜಪ್ತಿ ಮಾಡಿಕೊಂಡ ಮಧ್ಯದ ಸ್ಟಿಕರ್ ನಂ. ಹೇಳಲು ಬರುವುದಿಲ್ಲ. ಪಿ.ಎಸ್.ಐ ಇವರಿಗೆ ಸಹಾಯ ಮಾಡಲು ಪ್ರಕರಣ ಕುರಿತು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಸಂಗತಿಗಳು ಸುಳ್ಳು ಇವೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತ್ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.